# ಲೋಕಸೂತ್ರಂ

ಲೋಕಹಿತಂ ಪ್ರತಿಷ್ಠಾನದ ಮುಖವಾಣಿ

June 2025 | Special Edition | Published by Lokahitham Foundation | NOT FOR COMMERCIAL USE




## ನಾಲ್ಕು ಸಂವತ್ಸರಗಳು.. ಹಲವು ಕಾರ್ಯಗಳು..



# ಸಂಪಾದಕೀಯ

ಸ್ನೇಹಿತರೇ, ನಮಸ್ಕಾರ.

ಲೋಕಸೂತ್ರಂ - ಇದು ಲೋಕಹಿತಂ ಪ್ರತಿಷ್ಠಾನದ ಮುಖವಾಣಿ. ನಾಲ್ಕು ವರ್ಷಗಳಲ್ಲಿ ನಾವಿಟ್ಟ ಪುಟ್ಟ ಹೆಜ್ಜೆಗಳನ್ನು ಪ್ರಸ್ತುತ ಪಡಿಸುವ ಪ್ರಯತ್ನ.

ಇದು ಒಂದು e-Magazine ಆಗಿದ್ದು, ಇದರಲ್ಲಿ ಪ್ರತಿಷ್ಠಾನದ ಕೆಲವು ಯೋಜನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಜೊತೆಗೆ ಕೆಲವು ಸುದ್ದಿ-ಸಂಗ್ರಹಗಳನ್ನು ಹಂಚಿಕೊಳ್ಳಲಾಗಿದೆ.

ಪ್ರಸ್ತುತ ಜಗತ್ತಿನ Artificial Intelligence ಬಳಕೆಯ ಬಗ್ಗೆ ಸಂಕ್ಷಿಪ್ತವಾದ ಅಭಿಪ್ರಾಯವನ್ನು ತಿಳಿಸಲಾಗಿದೆ.

ಓದುಗರಿಗಾಗಿ ಕೆಲವು ಪ್ರಶ್ನೆಗಳನ್ನು ಕೊಟ್ಟು ಧರ್ಮದ ಬಗ್ಗೆ ಅರಿವು, ಕುತೂಹಲ ಮೂಡಿಸುವ ಪ್ರಯತ್ನವಾಗಿದೆ.

ಜೊತೆಗೆ ಮಂಕುತಿಮ್ಮನ ಕಗ್ಗ, ಸುಭಾಷಿತಗಳೊಂದಿಗೆ ಬದುಕಿಗೆ ಬೇಕಾದ ಆತ್ಮ ವಿಶ್ವಾಸ ತುಂಬುವ ಸಾಲುಗಳನ್ನು ಒಳಗೂಡಿದೆ.

ಓದುಗರು ಇದನ್ನು ಓದಿ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ನಿಮ್ಮ ಪ್ರೀತಿ ಮತ್ತು ಬೆಂಬಲಕ್ಕೆ ಧನ್ಯವಾದಗಳು.

ಲೋಕಹಿತಂ ಪ್ರತಿಷ್ಠಾನದ ವತಿಯಿಂದ ನಡೆಸಲಾದ ಕಾರ್ಯಗಳನ್ನು ದೇವರಿಗೆ ಅರ್ಪಿಸುತ್ತಾ, ಮುಂದಿನ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸ್ಫೂರ್ತಿ-ಶಕ್ತಿ ಬೇಡುತ್ತೇವೆ.

**- ಸಂಪಾದಕ**

**ನಮ್ಮ ಪ್ರತಿಷ್ಠಾನವನ್ನು ಶುರು ಮಾಡಲು ಪ್ರೇರೇಪಿಸಿದ ಈ ಶ್ಲೋಕವು ಶ್ರೀ ಶ್ರೀಧರ ಭಾಸ್ಕರ ವರ್ಣೇಕರರು ರಚಿಸಿದ ಸಂಸ್ಕೃತ ಶ್ಲೋಕ “ಮನಸಾ ಸತತಂ ಸ್ಮರಣೀಯಂ” - ಅದು ಮಾನವತೆಯ ಹಿತಕ್ಕಾಗಿ ನಾವು ಸದಾ ಸದುದ್ದೇಶದಿಂದ ಕಾರ್ಯನಿರ್ವಹಿಸಬೇಕೆಂಬ ನಮ್ಮ ಕರ್ತವ್ಯವನ್ನು ಬೋಧಿಸುತ್ತದೆ.**

मनसा सततं स्मरणीयं
वचसा सततं वदनीयं
लोकहितं मम करणीयम् ॥ लोकहितम् ॥

न भोगभवने रमणीयं न च सुखशयने शयनीयम् ।
अहर्निशं जागरणीयं लोकहितं मम करणीयम् ॥ १ ॥

न जातु दुःखं गणनीयं न च निजसौख्यं मननीयम् ।
कार्यक्षेत्रे त्वरणीयं लोकहितं मम करणीयम् ॥ २ ॥

दुःखसागरे तरणीयं कष्टपर्वते चरणीयम् ।
विपत्तिविपिने भ्रमणीयं लोकहितं मम करणीयम् ॥ ३ ॥

गहनारण्ये घनान्धकारे बन्धुजना ये स्थिता गह्वरे ।
तत्र मया सञ्चरणीयं लोकहितं मम करणीयम् ॥ ४ ॥

# ನಾಲ್ಕು ಸಂವತ್ಸರಗಳು.. ಹಲವು ಕಾರ್ಯಗಳು..






ಕಾಲ ಬೇಗ ಕಳೆಯುತ್ತದೆ. ನಿನ್ನೆ ಇದ್ದಂತೆ ಇಂದು ಇರುವುದಿಲ್ಲ, ಇಂದು ಇದ್ದಂತೆ ನಾಳೆ ಇರುವುದಿಲ್ಲ " ಕಾಲ ಕಳೆಯುತ್ತದೆ, ಆದರೆ ಅನುಭವ ಉಳಿಯುತ್ತದೆ " ಎಂಬ ಹಿರಿಯರ ಮಾತಿನಂತೆ ಕಳೆದ ಕಾಲದಲ್ಲಿ ನಾವೇನು ಮಾಡಿದೆವು? ಎಂಬ ಆತ್ಮವಿಮರ್ಷೆಯು ನಮ್ಮ ಮುಂದಿನ ಹಾದಿಯನ್ನು ರೂಪಿಸುತ್ತದೆ.

ಲೋಕಹಿತಂ ಪ್ರತಿಷ್ಠಾನವು ನಾಲ್ಕು ಸಂವತ್ಸರಗಳನ್ನು ಪೂರೈಸಿದ ಈ ಸಂಧರ್ಭದಲ್ಲಿ ಮಾಡಿದ ಕಾರ್ಯಗಳನ್ನು ನೆನಪಿಸಿಕೊಂಡು ಮುಂದಿನ ಹಾದಿ ರೂಪಿಸಿಕೊಳ್ಳಬೇಕಾಗಿದೆ.

### ಲೋಕಹಿತಂ ಪ್ರತಿಷ್ಠಾನದ ಪರಿಚಯ

ಲೋಕಹಿತಂ ಮಮ ಕರಣೀಯಂ ಎಂಬ ವಾಕ್ಯದೊಂದಿಗೆ ಜೂನ್ 21, 2021 ರಂದು ಭಾರತೀಯ ಸಂಸ್ಕೃತಿ, ಶಿಕ್ಷಣ, ಪರಿಸರ, ಗ್ರಾಮೀಣೋದ್ಯಮ - ಕ್ಷೇತ್ರಗಳಲ್ಲಿ ಸೇವೆ ಮಾಡಲು ಲೋಕಹಿತಂ ಪ್ರತಿಷ್ಠಾನವು ಶುರುವಾಯಿತು. ಕ್ಯಾಸಡವಿ ಪದ್ಧತಿಯ ನೈಸರ್ಗಿಕ ಕಾಡು ರೂಪಿಸುವ ಯೋಜನೆಯೊಂದಿಗೆ ಪ್ರತಿಷ್ಠಾನವು ತನ್ನ ಮೊದಲ ಹೆಜ್ಜೆಯನ್ನಿಟ್ಟಿತು. ನಂತರ ಇತರೆ ಕ್ಷೇತ್ರಗಳಲ್ಲಿ ಮಾಡಬಹುದಾದ ಸೇವೆಗಳನ್ನು ಸಣ್ಣ ಮಟ್ಟದಲ್ಲಿ ನಡೆಸುತ್ತಾ ಬಂದಿದೆ. ದೇಶ-ಸಂಸ್ಕೃತಿಯನ್ನು ಉಳಿಸಲು, ಬೆಳೆಸಲು ಶ್ರಮಿಸುತ್ತಿರು ಹಲವಾರು ಸಂಸ್ಥೆಗಳಿಗೆ ತನ್ನದೇ ರೀತಿಯಲ್ಲಿ ಸಹಕಾರ ನೀಡುತ್ತಾ ಬಂದಿದೆ.

### ಕೆಲವು ಯೋಜನೆಗಳ ಕಿರು ನೋಟ

ಪ್ರತಿಷ್ಠಾನವು ಉದ್ದೇಶಿಸಿದ ಕ್ಷೇತ್ರಗಳಲ್ಲಿ ಕೆಲವು ಯೋಜನೆಗಳನ್ನು ಕೈಗೊಂಡಿದೆ. ಕಳೆದ 14 ವರ್ಷಗಳಿಂದ ನಡೆಸುತ್ತಿರುವ ನಮ್ಮ ಸಾಫ್ಟ್‌ವೇರ್ ಉದ್ಯಮದಿಂದ ಹಲವಾರು ಸಂಸ್ಥೆಗಳಿಗೆ ವೆಬ್ಸೈಟ್ ಸಿದ್ಧಪಡಿಸಿ ನಿರ್ವಹಿಸಲಾಗುತ್ತಿದೆ. ಲೋಕಕಲ್ಯಾಣ ಕಾರ್ಯದಲ್ಲಿ ತೊಡಗಿರುವ ಸಂಸ್ಥೆಗಳಿಗೆ ಸಹಕಾರವನ್ನು ನೀಡುವ ಮೂಲಕ ತನ್ನ ಅಳಿಲು ಸೇವೆ ಮಾಡುತ್ತಿದೆ. ಕರ್ನಾಟಕದ ಎರಡು ಸ್ಥಳಗಳಲ್ಲಿ ಕ್ಯಾಸಡವಿ ಪದ್ಧತಿಯ ಕಾಡುಗಳನ್ನು ನಿರ್ಮಿಸಲಾಗಿದೆ. ಸಣ್ಣ ಮಟ್ಟದಲ್ಲಿ ಕೆಲವಾರು ಸಲ ಉದ್ಯಮಿಗಳ ಸಮಾವೇಶವನ್ನು ನಡೆಸಿ ಯುವ ಮತ್ತು ಗ್ರಾಮೀಣೋದ್ಯಮಿಗಳಿಗೆ ಬೇಕಾದ ನೆರವು, ಮಾರ್ಗದರ್ಶನವನ್ನು ನೀಡಲಾಗಿದೆ.

### ಲೋಕಹಿತಂ ಪ್ರತಿಷ್ಠಾನದ ವತಿಯಿಂದ ಪ್ರೋತ್ಸಾಹಿಸಲ್ಪಡುತ್ತಿರುವ ಸಂಸ್ಥೆಗಳು

- ಶ್ರೀಧರಾಶ್ರಮ, ವರದಪುರ ( ಸಾಗರ )
- ಜಗನ್ಮಾತಾ ಗೋಶಾಲೆ, ಬೆಂಗಳೂರು
- ಪ್ರಣವ ಸೇವಾ ಪ್ರತಿಷ್ಠಾನ, ಬೆಂಗಳೂರು
- ನೆಲೆ ಫೌಂಡೇಷನ್, ಬೆಂಗಳೂರು
- ಹಿಂದೂ ಸೇವಾ ಪ್ರತಿಷ್ಠಾನ, ಬೆಂಗಳೂರು
- ಪ್ರಬೋದಯಾತ್



## ಕ್ಯಾಸಡವಿ ಪದ್ಧತಿ

ಕ್ಯಾಸಾಳ/ಕೆಂದಳಿಲು (Malabar giant squirrel) ಎಂಬ ಅಳಿಲು ಕುಟುಂಬದ ವನ್ಯ ಪ್ರಾಣಿಯ ಬೀಜ ಪ್ರಸರಣದ ಮೂಲಕ ಅರಣ್ಯ ವೃದ್ಧಿಸುವ ಬದುಕಿನ ಗತಿಯಿಂದ ಪ್ರೇರಣೆಗೊಂಡು ಒಡಮೂಡಿದ ಪರಿಕಲ್ಪನೆಯೇ ಕ್ಯಾಸಡವಿ ಅರಣ್ಯ ನಿರ್ಮಾಣ ಪದ್ಧತಿ.. ಅತ್ಯಂತ ಕಡಿಮೆ ನಿರ್ವಹಣೆಯನ್ನು ಬಯಸುವ ಈ ಪದ್ಧತಿಯಲ್ಲಿ ಸ್ಥಳೀಯ ಕಾಡು ಜಾತಿಯ ಸಸ್ಯಗಳನ್ನು ಆಯ್ಕೆ ಮಾಡಿಕೊಂಡು, ಕಡಿಮೆ ಅಂತರದಲ್ಲಿ ಸಸಿಗಳನ್ನು ನೆಡುವುದೇ ಇದರ ಜೀವಾಳ. ಹಲವು ಸಂಖ್ಯೆಗಳಲ್ಲಿ ನೆಟ್ಟಂತಹ ಕಾಡು ಸಸ್ಯಗಳಲ್ಲಿ ಕೆಲವು ಸಮರ್ಥವಾದ ಸಸ್ಯಗಳು ಮಾತ್ರ ನೈಸರ್ಗಿಕ ಆಯ್ಕೆಯ ಮೂಲಕ ಉಳಿದುಕೊಂಡು ದಟ್ಟವಾದ ಹಸಿರು ಹೊದಿಕೆಯನ್ನು ಸ್ಥಾಪಿಸುತ್ತವೆ.

## ಮುಂದೇನು?

ಹಿಂದೂ ಧರ್ಮ ಭಾರತದ ಅಸ್ಮಿತೆ. ಆದರೆ ಅದಕ್ಕಿರುವ ಆಕ್ರಮಣಗಳು ಹಲವಾರು. ಎಷ್ಟು ಆಳವಾಗಿ ಬೇರೂರಿದ್ದರೂ ಸಹ ಪರಧರ್ಮದವರ ಕೆಟ್ಟ ಯೋಚನೆಗಳಿಂದ ಆಗುವ ದುಷ್ಪರಿಣಾಮಗಳು ಹಲವು. ಮುಂದೊಂದು ದಿನ ಅದು ನಮ್ಮ ಧರ್ಮವನ್ನೇ ನಾಶಮಾಡಬಹುದು. ಹಾಗಾಗಿ ಮುಂದೊಂದು ದಿನ ಧರ್ಮಕ್ಕೆ ಸಂಕಷ್ಟ ಬಂದಾಗ ನಾವೆಲ್ಲ ಹೋರಾಡಲು ಸಿದ್ಧರಿರಬೇಕು, ಶಕ್ತರಾಗಿರಬೇಕು. ನಮ್ಮ ಸಂಸ್ಥೆಗಳು, ವ್ಯಾಪಾರಗಳು, ಸೇವಾ ಕೇಂದ್ರಗಳು, ದೇವಸ್ಥಾನಗಳು - ಇವೆಲ್ಲವೂ ಕೂಡ ಸಧೃಡವಾಗಿರಬೇಕು.

ಹಾಗಾಗಿ ಅಂತ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದು ಅತ್ಯವಶ್ಯಕ. ಮುಂದೆಯೂ ಸಹ ಲೋಕಹಿತಂ ಪ್ರತಿಷ್ಠಾನವು ಇದನ್ನು ಮುಂದುವರೆಸುತ್ತದೆ ಹಾಗೂ ಪರಿಸರ, ಶಿಕ್ಷಣ, ಉದ್ಯಮ ಮುಂತಾದ ಕ್ಷೇತ್ರಗಳಲ್ಲಿ ನಮ್ಮಿಂದ ಮಾಡಬಹುದಾದ ಇನ್ನಷ್ಟು ಸೇವೆಗಳನ್ನು ರೂಪಿಸಬೇಕಿದೆ.



- ಭಾರತೀಯ ಸಂಸ್ಕೃತಿ
- ಪರಿಸರ
- ಗ್ರಾಮೀಣೋದ್ಯಮ
- ಶಿಕ್ಷಣ

ಸ್ನೇಹಿತರೇ,
ಲೋಕಹಿತಂ ಪ್ರತಿಷ್ಠಾನದ ಕಾರ್ಯಗಳಲ್ಲಿ ಜೊತೆಯಾಗುವವರು, ಸಲಹೆಗಳನ್ನು ನೀಡಲು ಅಥವಾ ನಮ್ಮ ಕಾರ್ಯಯೋಜನೆಗಳ ಬಗ್ಗೆ ಇನ್ನಷ್ಟು ಮಾಹಿತಿ ತಿಳಿದುಕೊಳ್ಳಲು ನಮ್ಮ Website ಮೂಲಕ ಸಂಪರ್ಕಿಸಬಹುದು.

# ಸುದ್ದಿ~ಸಂಗ್ರಹ




**ಪ್ರಣವ ಸೇವಾ ಪ್ರತಿಷ್ಠಾನದ ವೆಬ್ಸೈಟ್ ಲೋಕಾರ್ಪಣೆ**
ಇತ್ತೀಚೆಗೆ ಲೋಕಹಿತಂ ಪ್ರತಿಷ್ಠಾನವು ಬೆಂಗಳೂರಿನ ಈ ಸಮಾಜ ಸೇವಾ ಸಂಸ್ಥೆಯ ವೆಬ್ಸೈಟ್ ಸಿದ್ಧಪಡಿಸಿ ಲೋಕಾರ್ಪಣೆಗೊಳಿಸಿತು. ವರ್ಡ್ ವಿಷನ್ ಸಾಫ್ಟ್ವೇರ್ ಸಹಯೋಗದೊಂದಿಗೆ ಸಿಧಪಡಿಸಿದ ವೆಬ್ಸೈಟ್ ಪ್ರಣವ ಸೇವಾ ಸಂಸ್ಥೆಯ ಕಾರ್ಯಗಳನ್ನು ಲೋಕಕ್ಕೆ ಪರಿಚಯಿಸಿದೆ.




**ಉದ್ಯಮಿಗಳಿಗಾಗಿ ನೆಟ್ವರ್ಕಿಂಗ್ ಕಾರ್ಯಗಾರ**
ಉದ್ಯಮಿಗಳಿಗೆ ಸದವಕಾಶಗಳನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಪ್ರತಿಷ್ಠಾನದ ವತಿಯಿಂದ ಹಲವು ಕಾರ್ಯಗಾರಗಳನ್ನು ನಡೆಸಲಾಗಿದ್ದು ಕೆಲವು ಸಂಸ್ಥೆಗಳ ಆಯೋಜನೆಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಾಗಿದೆ.




**ಶ್ರೀಧರಾಶ್ರಮದ ವೆಬ್ಸೈಟ್ ಗೆ ಮೂರು ವರ್ಷಗಳು**
2022 ರಲ್ಲಿ ಸಿದ್ಧಪಡಿಸಿದ ಆಶ್ರಮದ ವೆಬ್ಸೈಟ್ ಈವರೆಗೆ ಲಕ್ಷಾಂತರ ಭಕ್ತರಿಗೆ ಶ್ರೀಧರ ಸ್ವಾಮಿಗಳ ಬಗ್ಗೆ ಮಾಹಿತಿ ನೀಡಲು ಸಹಕಾರಿಯಾಗಿದೆ ಮತ್ತು ಸೇವೆಗಳನ್ನು Online ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸಿದೆ. ನಮಗೆ ಈ ಮೂಲಕ ಸೇವೆ ಸಲ್ಲಿಸಲು ಅವಕಾಶ ಕೊಟ್ಟ ಶ್ರೀಧರಾಶ್ರಮಕ್ಕೆ ಧನ್ಯವಾದಗಳು.

# Artificial Intelligence ಮನುಷ್ಯನನ್ನು ಸೋಮಾರಿಯನ್ನಾಗಿಸುತ್ತಿದೆಯೇ?

ಇತ್ತೀಚಿನ ಕಾಲದಲ್ಲಿ ಎಲ್ಲೆಡೆ ಕೇಳಿಬರುತ್ತಿರುವ ಪದವೆಂದರೆ — Artificial Intelligence (ಕೃತಕ ಬುದ್ಧಿಮತ್ತೆ). ಇದು ದಿನದಿಂದ ದಿನಕ್ಕೆ ಹೆಚ್ಚಿನ ಕ್ಷೇತ್ರಗಳಲ್ಲಿ ಮನುಷ್ಯನ ಕೆಲಸವನ್ನು ಸರಳಗೊಳಿಸುತ್ತಿದೆ. ಆದರೆ, ಕೇಳಬೇಕಾದ ಪ್ರಶ್ನೆ ಇಲ್ಲಿದೆ: "ಈ ಸುಲಭದ ಜೀವನ ನಮ್ಮನ್ನು ಹೆಚ್ಚು ಪರಿಣಾಮಕಾರಿಗಳನ್ನಾಗಿಸುತ್ತಿದೆಯೆ? ಅಥವಾ ಸೋಮಾರಿಗಳನ್ನಾಗಿಸುತ್ತಿದೆಯೆ?"



### AI ನ ಉಪಕಾರಗಳು: ಒಂದೊಂದು ಮೆಟ್ಟಿಲಾಗಿ ಮುನ್ನಡೆಸುವ ಸಾಧನ

1. **ವೇಗ ಮತ್ತು ಕೌಶಲ್ಯ:** AI today powers medical diagnosis, legal research, agriculture, and finance with unmatched speed and accuracy.
   ಉದಾಹರಣೆ: ರೋಗವನ್ನು ಮುಂಚಿತವಾಗಿ ಗುರುತಿಸುವ ಯಂತ್ರಗಳು, ರೈತರಿಗೆ ಮುಂಗಡ ಮಾಹಿತಿ ನೀಡುವ Apps.
2. **ದಿನನಿತ್ಯದ ಸೌಲಭ್ಯಗಳು:** ಮನೆಗಳಲ್ಲಿ Google Assistant, ChatGPT, Siri ಇತ್ಯಾದಿ ಬಳಸುವ ಮೂಲಕ ಕೆಲಸ ಹೆಚ್ಚು ಸುಲಭವಾಗುತ್ತಿದೆ.
3. **ಕಳೆದ ಸಮಯದ ಪತನ:** ಕೆಲಸ automate ಆದರಿಂದ ಮನುಷ್ಯನು ತನ್ನ ಕಾಲವನ್ನು ಹೊಸ ಕಲಿಕೆ ಅಥವಾ ವಿಶ್ರಾಂತಿಗಾಗಿ ಬಳಸಬಹುದಾಗಿದೆ.

### ಆದರೆ, ಸೋಮಾರಿತನದ ಬೆವರಿನಲ್ಲಿ ಮರೆಯುವ ಹಾದಿಯೂ ಇದೆ

1. **ಚಿಂತನೆಯ ಕೊರತೆ:** ಎಲ್ಲವನ್ನೂ ಯಂತ್ರವಿಲ್ಲದೆ ಕಲಿಯಬೇಕಾದ ಮನಸ್ಸಿನ ಶಕ್ತಿ ಇತ್ತೀಚೆಗೆ ಕುಗ್ಗುತ್ತಿದೆ.
   ಉದಾಹರಣೆ: ಗಗಣಿತ ಲೆಕ್ಕಗಳನ್ನು calculator ಅಥವಾ app ಬಳಸಿ ಮುಗಿಸಲಾಗುತ್ತಿದೆ.
2. **ಆಳವಾದ ಆಲೋಚನೆಗಳ ಕೊರತೆ:** ಈಗ ಪ್ರಶ್ನೆಗೆ ಉತ್ತರ ಬೇಕಾದರೆ ನಾವು ಯಂತ್ರವನ್ನು ಕೇಳುತ್ತೇವೆ. ಸ್ವಾವಲಂಬನೆಯು ಕುಗ್ಗುತ್ತಿದೆ.
3. **ಉದ್ಯೋಗ ಭೀತಿ:** automation ಬೆಳೆಯುತ್ತಿದ್ದಂತೆ ಹಲವಾರು ಕಡಿಮೆ ಶ್ರೇಣಿಯ ಉದ್ಯೋಗಗಳು ಮಾಯವಾಗುವ ಸಾಧ್ಯತೆ ಇದೆ.
4. **ಆಲಸ್ಯದ ಆತಂಕ:** "AI ಇದೆ ಅಲ್ವಾ? ನಾನೇಕೆ ಯೋಚಿಸಬೇಕು?" ಎಂಬ ಪ್ರವೃತ್ತಿ ಹೆಚ್ಚಾಗುತ್ತಿದೆ.

### ಹೀಗಾಗಿ ಉತ್ತರ ಏನು?

AI ಉಪಯೋಗಿಸುವುದು ತಪ್ಪಲ್ಲ, ಆದರೆ, ಅದರಲ್ಲಿ ಪೂರ್ಣ ನಂಬಿಕೆ ಇಟ್ಟು, ನಾವು ನಮ್ಮ ಸ್ವತಂತ್ರ ಚಿಂತನೆ, ಕಲಿಕೆ ಮತ್ತು ಕ್ರಿಯಾಶೀಲತೆಯನ್ನು ಕಳೆದುಕೊಂಡರೆ ಅದು ಸೋಮಾರಿತನವಲ್ಲದೇ ಬೇರೆ ಏನು?
Artificial Intelligence ನು ಸೇವಕನಂತೆ ಉಪಯೋಗಿಸಬೇಕು; ಮಾಲೀಕರಾಗಿ ಬಿಡಬಾರದು. ಮನುಷ್ಯನ ಬುದ್ಧಿ, ಜಾಣ್ಮೆ ಮತ್ತು ಹೃದಯವನ್ನು ಯಾವ ಯಂತ್ರವೂ ಬದಲಾಯಿಸಬಲ್ಲದು.

- AI ಉಪಯೋಗಿಸಿ ಸಮಯ ಉಳಿಸೋಣ
- ಆದರೆ ಅದನ್ನೇ ನಂಬಿ ಅಲಸ್ಯವಶರಾಗದಿರೋಣ

# ಪಂಚ~ಪಶ್ನೆ

**ಪ್ರಶ್ನೆ 1 :**

**ರಾಮಾಯಣದಲ್ಲಿ, ರಾಮನು ವನವಾಸಕ್ಕೆ ಹೊರಡುವಾಗ ಸೀತೆಗೆ ಯಾವ ತಾತ್ವಿಕ ಪಾಠವನ್ನು ನೀಡುತ್ತಾನೆ?**

A) ಭಯವಿಲ್ಲದ ಧೈರ್ಯ

B) ಧರ್ಮ ಪಾಲನೆ

C) ತ್ಯಾಗದ ಮಹತ್ವ

D) ಶತ್ರುಗಳ ವಿರುದ್ಧ ಹೋರಾಟ

---

**ಪ್ರಶ್ನೆ 2 :**

**ಮಹಾಭಾರತದಲ್ಲಿ, ಯುದ್ಧದ ಸಮಯದಲ್ಲಿ ಅರ್ಜುನನಿಗೆ ಕೃಷ್ಣನು ನೀಡಿದ 'ನಾನು ನೀನಲ್ಲ' ಎಂಬ ಸಂದೇಶ ಯಾವ ಅಧ್ಯಾಯದಲ್ಲಿ ಬರುತ್ತದೆ?**

A) 1ನೇ ಅಧ್ಯಾಯ – ಅರ್ಜುನ ವಿಷಾದ ಯೋಗ

B) 2ನೇ ಅಧ್ಯಾಯ – ಸಾಂಖ್ಯ ಯೋಗ

C) 11ನೇ ಅಧ್ಯಾಯ – ವಿಶ್ವರೂಪ ದರ್ಶನ

D) 18ನೇ ಅಧ್ಯಾಯ – ಮೋಕ್ಷೋಪದೇಶ ಯೋಗ

---

**ಪ್ರಶ್ನೆ 3 :**

**ಪಂಚ ಮಹಾ ಯಜ್ಞಗಳಲ್ಲಿ 'ಪಿತೃ ಯಜ್ಞ' ಎಂದರೆ ಏನು?**

A) ಪಿತಾಮಹರನ್ನು ತ್ಯಾಗಮಾಡುವುದು

B) ಪಿತೃಗಳ ಆತ್ಮಕ್ಕೆ ಶ್ರಾದ್ಧ ಮತ್ತು ತರ್ಪಣ

C) ಯುದ್ಧದಲ್ಲಿ ಜಯ ಸಾಧನೆ

D) ತಾಂತ್ರಿಕ ಯಜ್ಞಗಳು

**ಪ್ರಶ್ನೆ 4 :**

**ಹಿಂದೂ ಸಂಪ್ರದಾಯದ ಪ್ರಕಾರ, ಗೃಹಸ್ಥ ಆಶ್ರಮದ ಪ್ರಮುಖ ಕರ್ತವ್ಯ ಯಾವದು?**

A) ತಪಸ್ಸು ಮತ್ತು ನಿಯಮ ಪಾಲನೆ

B) ಪುಣ್ಯ ಸಾಧನೆ ಮತ್ತು ತೀರ್ಥಯಾತ್ರೆ

C) ಕುಟುಂಬ ನಿರ್ವಹಣೆ ಮತ್ತು ಸಮಾಜ ಸೇವೆ

D) ನಿರ್ಲಿಪ್ತ ಬದುಕು

---

**ಪ್ರಶ್ನೆ 5 :**

**'ಅಯೋಧ್ಯೆ' ಯಾವ ನದಿಯ ತೀರದಲ್ಲಿದೆ?**

A) ಗಂಗಾ

B) ಸರಸ್ವತಿ

C) ಸರಯೂ

D) ಯಮುನಾ

**ನಿಮ್ಮ ಉತ್ತರಗಳನ್ನು QR Scan ಮಾಡಿ ಕಳುಹಿಸಿ. ಎಲ್ಲಾ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ನೀಡಿದ ಮೊದಲ ೩ ಜನರಿಗೆ ಪುಸ್ತಕ ಬಹುಮಾನ ನೀಡಲಾಗುವುದು.**

## ಬದುಕಿಗೊಂದು ಕಗ್ಗ

**ಬಾಳ್ಕೆಯಲಿ ನೂರೆಂಟು ತೊಡಕು ತಿಣಕುಗಳುಂಟು |**
**ಕೇಳ್ಕೆಮಾಣ್ಕೆಗಳಿಗವು ಜಗ್ಗವೊಂದಿನಿಸುಂ ||**
**ಗೋಳ್ಕರೆದರೇನು ಫಲ? ಗುದ್ದಾಡಲೇನು ಫಲ? |**
**ಪಲ್ಕಿರಿದು ತಾಳಿಕೊಳೊ- ಮಂಕುತಿಮ್ಮ ||**

Publisher : Lokahitham Foundation | Reference Number : LF/LS/2025/JUN | NOT FOR COMMERCIAL USE

* All materials (texts, images, and design) are intended for informational, educational, and cultural purposes only. Unauthorized reproduction or distribution of any part of this magazine is prohibited without prior permission.

# ಸುಭಾಷಿತ

ಬದುಕೆನ್ನುವದು ಎರಡು
ಚಕ್ರದ ರಥ : ದೈವ
ಮತ್ತು ಪುರುಷ ಪ್ರಯತ್ನ
ರಥದ ಎರಡು ಚಕ್ರಗಳು.